ಶ್ರೀ ಜೆ. ಎಲ್. ಕಬ್ಬಾಡಿ.—ಕೇವಲ ಕಂಬಗಳನ್ನು ಹಾಕಿ, ವೈರ್ ಇಲ್ಲ ಎಂದು ಹಾಗೆಯೇ ಬಿಡುತ್ತಿದ್ದೀರಿ. ಖಾಸಗೀ ಜನರಿಗೆ ಸ್ವಂತ ವೈರ್ ಹಾಕಿಕೊಂಡರೆ ಕನ್‌ಕ್ಷನ್ ಕೊಡುತ್ತೇವೆ ಎಂದು ಹೇಳಿ ಸರ್ಕುಲರ್‌ನಲ್ಲಿ ಬೋರ್ಡಿನವರೆ ಆದೇಶ ಕೊಟ್ಟಿದ್ದಾರೆ. ಈಗ ವೈರ್ ಸಿಕ್ಕದೇ ಇರುವುದರಿಂದ, ಎಲ್ಲಿ ಸಿಕ್ಕುತ್ತದೆ ಎಂದು ಅಡ್ರೆಸ್ ಏನಾದರೂ ಕೊಡುತ್ತೀರಾ ?

ಶ್ರೀ ಎಚ್. ಸಿ ಶ್ರೀಕಂಠಯ್ಯ.—ಅದನ್ನು ಬರೆದರೆ ತಿಳಿಸುತ್ತೇವೆ.

ಶ್ರೀ ಎ. ನಂಜಪ್ಪ.—ಮುಂಜೂರಾಗದೇ ಇರತಕ್ಕ ಹಳ್ಳಿಗಳನ್ನು ಮುಂದಿನ ವರ್ಷ ಮುಂಜೂರಾತಿಗಾಗಿ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—1973-74ನೇ ಸಾಲಿನಲ್ಲಿ 65 ಹಳ್ಳಿಗಳಿಗೆ ಈಗಾಗಲೇ ಮುಂಜೂರು ಮಾಡಿದ್ದೇವೆ. ಇದರಲ್ಲಿ 14 ಹಳ್ಳಿಗಳ ಪೈಕಿ 9 ಹಳ್ಳಿಗಳ ಕೆಲಸ ಮುಗಿದಿದೆ. ನಮಗೆ ಸಾಮಾನಿನ ಅಭಾವ ಕಡಮೆಯಾಗಿ, ಅಲ್ಯೂಮಿನಿಯಂ ಕಂಡಕ್ಟರ್ಸ್ ಧಾರಾಳವಾಗಿ ಸಿಕ್ಕಿದಾಗ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಬಾಪೂಗೌಡ.—ಹಳ್ಳಿಗಳಲ್ಲಿ ಎಮ್ಮೆಜ್ಜಿಕ್ಕೆ ಒದಗಿಸುವುದಕ್ಕೆ ತಂತಿ ಮತ್ತು ಕಂಡಕ್ಟರ್ಸ್ ಇಲ್ಲದ ಕಾರಣ ತಡವಾಗುತ್ತದೆ ಎಂದು ಹೇಳಿದ್ದೀರಿ. ಈ ಅಭಾವವನ್ನು ಪೂರೈಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ 1975-76ನೇ ಸಾಲಿನಲ್ಲಿ ಈ ತಂತಿ ಮತ್ತು ಕಂಡಕ್ಟರ್ಸ್ ಅಭಾವ ನೀಗಿಸುವುದಕ್ಕೆ ಸರಕಾರದವರು ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ತಮಗೆರ್ಲಾ ಗೊತ್ತಿರುವ ಹಾಗೆ, ಅಲ್ಯೂಮಿನಿಯಂ ಅಭಾವ ನಮ್ಮ ರಾಜ್ಯದಲ್ಲಷ್ಟೇ ಅಲ್ಲ, ಇಡೀ ರಾಷ್ಟ್ರದಲ್ಲೇ ಇದೆ. ಆದುದರಿಂದ, ಎಲೆಕ್ಟ್ರಿಸಿಟಿ ಬೋರ್ಡಿನವರು ಮತ್ತು ಸರಕಾರದವರು ಸಾಧ್ಯವಾದಷ್ಟು ಅಲ್ಯೂಮಿನಿಯಂನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ಮಾಡಿ, ಶೀಘ್ರವಾಗಿ ಇವುಗಳ ಅಭಾವವನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ.

Providing Borewells in Turuvekere Taluk

261 **Sri B. BYRAPPAJI** (Turuvekere).—

Will the Minister for Rural Development and Social Welfare be pleased to state:—

(*a*) the number of villages in Turuvekere Taluk, Tumkur District, without drinking water wells ;

(*b*) whether it has come to the notice of the Government that in certain villages where rigs are already operating the water is not struck and wells have failed ;

(*c*) if so, the steps to be taken by the Government to provide drinking water to all the villages of Turuvekere Taluk immediately ?

Sri N. RACHAIAH (Minister for Rural Development and Social Welfare).—

(*a*) 21 villages.

(*b*) Yes.

(*c*) Borewells will be constructed again as per the advice of Geologists at places of Turuvekere Taluk where borewells have failed and borewells will be provided to other villages also where drinking water facilities are not provided. Where borewells are not possible, drawing water wells will be provided.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ತಾವು (ಅ) **ಗೆ** ಉತ್ತರವಾಗಿ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದೆ, ರಿಗ್ಸ್ ಹಾಕಿಸಿದ್ದು ಅವು ಫೆಲ್ಯೂರ್ ಆಗದೆ ಎಂದು ಹೇಳಿದ್ದೀರಿ. ಹಾಗೆ ಫೆಲ್ಯೂರ್ ಆಗಿರತಕ್ಕ ಹಳ್ಳಿಗಳ ಸಂಖ್ಯೆ ಎಷ್ಟು ? ಮತ್ತು ರಿಗ್ಸ್ ಹಾಕಿಸಿ ಎಷ್ಟು ದಿವಸ ವಾಯಿತು ? ಇಲ್ಲಿಯತನಕ ಫೆಲ್ಯೂರ್ ಆಗಿರುವ ಬಾವಿಗಳಿಗೆ ಮತ್ತೆ ರಿಗ್ಸ್ ಹಾಕಿಸುವುದಕ್ಕೆ ಏನಾದರೂ ವ್ಯವಸ್ಥೆ ಕ್ಯೆಗೊಂಡಿದ್ದೀರಾ ?

† ಶ್ರೀ ಎನ್. ರಾಚಯ್ಯ.— ಈಗ 19 ಹಳ್ಳಿಗಳಲ್ಲಿ ಬೋರ್‌ವೆಲ್‌ಗಳನ್ನು ತೆಗೆದಿದ್ದೇವೆ. 4—5 ಹಳ್ಳಿಗಳಲ್ಲಿ ಫೆಲ್ಯೂರ್ ಆಗಿದೆ. ಮತ್ತು ಎಲ್ಲೆಲ್ಲಿ ನೀರು ಯಶಸ್ವಿಯಾಗಿ ಬರುವುದಿಲ್ಲವೋ ಅಂತಹ ಕಡೆಗಳಲ್ಲಿ ಚೆನ್ನಾಗಿರುವ ಸೈಟ್ಸ್‌ನ್ನು ಆರಿಸಿ, ಅಲ್ಲ ಬೋರ್‌ವೆಲ್ ತೆಗೆಯಬೇಕೆಂದು **ಆದೇಶ** ಕೊಟ್ಟಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—**ಈಗ** ಸರಕಾರದವರು ಆದೇಶ ಹೊರಡಿಸಿದ್ದೀರಿ—ಓಪನ್ **ವೆಲ್** ಗಳನ್ನು ತೆಗೆಸಕೂಡದು ಎಂದು. ಅದರ ಪ್ರಕಾರ ಎಲ್ಲೆಲ್ಲಿ ಓಪನ್ ವೆಲ್‌ಗಳನ್ನು ತೆಗೆಯುತ್ತಿದ್ದಾರೆ ಅಂತಹ ಕಡೆ ನಿಲ್ಲಿಸಿದ್ದಾರೆ. ಮತ್ತೆ **ಜಿಲ್ಲಾಧಿಕಾರಿಗಳ** ಅನುಮತಿ ತೆಗೆದುಕೊಂಡು ತೆಗೆಯಬೇಕೆಂದು, ಆದೇಶ ಕೊಟ್ಟಿರುತ್ತೀರಿ. ಕೆಲವು **ಕಡೆಗಳಲ್ಲಿ** ಓಪನ್ ವೆಲ್‌ಗಳಲ್ಲಿ ನೀರು ಒದಗಿಸತಕ್ಕ ಸಾಧ್ಯತೆ ಇದ್ದರೂ ಕೂಡ **ಅವನ್ನು** ನಿಲ್ಲಿಸಿರುವುದರಿಂದ ಕುಡಿಯುವ ನೀರಿನ ಅಭಾವ ಜಾಸ್ತಿಯಾಗಿದೆ. ಆದುದರಿಂದ ಓಪನ್ ವೆಲ್‌ಗಳನ್ನು ಸಾಧ್ಯವಿದ್ದ ಕಡೆ ತೆಗೆಯುವಂತೆ ವ್ಯವಸ್ಥೆ ಮಾಡಬೇಕು ಮತ್ತು ರಿಗ್ಸ್‌ನ್ನು ಹಾಕಿ ಫೆಲ್ಯೂರ್ ಆಗಿರತಕ್ಕ ಕಡೆ **ಆದಷ್ಟು** ಶೀಘ್ರವಾಗಿ ಎಲ್ಲೆಲ್ಲಿ ನೀರು ಬರತಕ್ಕ ಸ್ಥಳ ಇದೆ ಅಂತಹ **ಕಡೆ** ರಿಗ್ಸ್ ಹಾಕಿಸಿ ನೀರನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಮತ್ತು ನರಕ್ಯೂಲರ್ ಏನು ಕೊಟ್ಟಿದ್ದೀರಿ, ಈ ಓಪನ್ ವೆಲ್‌ಗಳನ್ನು ತೆಗೆಯಕೂಡದು ಎಂದು ಆದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಸಾಧ್ಯವಾದಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಬೇಕು ಮತ್ತು ಹ್ಯಾಂಡ್‌ಪಂಪ್ ಹಾಗೂ ಪವರ್ ಪಂಪ್‌ಗಳನ್ನು ಹಾಕಿಸಿ ರಾಷ್ಟ್ರೀಯ ನೀರು ನರಬರಾಜು ಯೋಜನೆ ಪ್ರಕಾರವಾಗಿ ನೀರು ಕೊಡಬೇಕೆಂದು ಕೇಂದ್ರ ಸರಕಾರದವರ ಆದೇಶ ಇರುವುದರಿಂದ, ಅವರ ಪ್ರಕಾರವಾಗಿ ಈ ಸುತ್ತೋಲೆಯನ್ನು ಕಳುಹಿಸಿದ್ದೇವೆ. ಎಲ್ಲೆಲ್ಲಿ ಬೋರ್ ವೆಲ್‌ಗಳು ಯಶಸ್ವಿಯಾಗುವುದಿಲ್ಲವೋ ಅಂತಹ ಕಡೆ ಸಾಧ್ಯವಾದರೆ ಒಂದು ಓಪನ್‌ವೆಲ್‌ನ್ನು ಮಾಡತಕ್ಕದ್ದು ಎಂದು ಯೋಚನೆ ಮಾಡಿದ್ದೇವೆ.

ಶ್ರೀ ಎಂ. ಎಂ. ನಡಾಫ್.—ಸ್ವಾಮಿ, ಈಗ ಜಿಯಾಲಿಜಿಸ್ಟ್ ಕೊರತೆಯಿರುವುದರಿಂದ ಬಾವಿಗಳನ್ನು ತೆಗೆಯುವುದಕ್ಕೆ ತೀವ್ರವಾಗಿ ಆಗುತ್ತಿಲ್ಲ, ಆದುದರಿಂದ ತೀವ್ರವಾಗಿ ಜಿಯಾಲಿಜಿಸ್ಟ್ ನೇಮಕ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

Sri N. RACHAIAH.—It is a suggestion for action.

ಶ್ರೀ ಆರ್. ರಾಜೇಗೌಡ.—ಸ್ವಾಮಿ, ಈ ಬಾವಿಗಳನ್ನು ಆಳಮಾಡಲಿಕ್ಕೆ ಒಂದು ಸಾವಿರ ರೂಪಾಯಿ ಮಾತ್ರ ಖರ್ಚುಮಾಡಬೇಕು ಎಂದು ಅಧಿಕಾರಿಗಳು ಹೇಳುತ್ತಾರೆ ಇದು ನಿಜವೇ ?

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರಿಗೆ ಗೊತ್ತಿದೆ ಕೆಲವು ಕಡೆ ನಾಲ್ಕುನೂರು ಐದು ನೂರು ರೂಪಾಯಿಗಳನ್ನೂ ಖರ್ಚುಮಾಡಿ ಹಣ ದುರುಪಯೋಗವಾಗುತ್ತಿದೆ ಎಂದು ತಿಳಿದು ಬಂದಿದೆ, ಆದುದರಿಂದ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ, ಎಷ್ಟು ಆಗತ್ಯವಿರುತ್ತದೋ ಆಷ್ಟನ್ನು ಕೊಡಲಕ್ಕೆ ಸರ್ಕಾರ ತಯಾರಾಗಿದೆ. ಒಂದು ಸಾವಿರ ರೂಪಾಯಿ ಆಳ ಮಾಡುವುದಕ್ಕೆ ಕೊಟ್ಟರೆ ಕೆಲವು ಬಾವಿಗಳಿಗೆ ಐದು ಸಾವಿರ ರೂಪಾಯಿವರೆಗೆ ಖರ್ಚು ಮಾಡಿದ್ದಾರೆ, ಬಿಲ್ ಪಾವತಿ ಮಾಡಿ ಎಂದು ಮನವಿ ಬಂದಿದೆ, ಆಲ್ಲಿ ಎಷ್ಟು ಆಗತ್ಯ ಆವೆಯೋ ಆಷ್ಟು ಕೊಡಲಿಕ್ಕೆ ಸಾಧ್ಯ. ನಾಲ್ಕು, ಐದು ಸಾವಿರ ರೂಪಾಯಿಗಳನ್ನು ಆ ಬಾವಿಗಳನ್ನು ಆಳಮಾಡುವುದಕ್ಕೆ ಕೊಡಿ ಎಂದು ಹೇಳುವುದನ್ನು ಸುಲಭವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ತಾವು ತಮ್ಮ ಉತ್ತರದಲ್ಲಿ ಇಪ್ಪತ್ತೊಂದು ಗ್ರಾಮಗಳು ಎಂದು ಹೇಳಿದ್ದೀರಿ, ಇಲ್ಲಿ ನೀರು ಇಲ್ಲದೆ ಬಹಳ ಕಠಿಣವಾದ ಪರಿಸ್ಥಿತಿ ಉದ್ಭವವಾಗಿದೆ, ಕೂಡಲೇ ತಾವು ರಿಗ್ ಕಳುಹಿಸಿಕೊಟ್ಟು ಕುಡಿಯುವ ನೀರಿನ ವ್ಯವಸ್ಥೆಯನ್ನು ನರಿಪಡಿಸಲು ಏರ್ಪಾಡು ಮಾಡುತ್ತೀರಾ ? ಈಗ ನಲವತ್ತೈದು, ನಲವತ್ತಾರು ಗ್ರಾಮಗಳಲ್ಲಿ ಹ್ಯಾಮರೆಟ್ಸ್ ಕೂಡ ಇದೆ, ಇಲ್ಲಿ ಹಿಂದೆ ಕುಡಿಯುವ ನೀರಿಗೆ ಬಹಳ ಕಠಿಣವಾದ ಪರಿಸ್ಥಿತಿ ಉದ್ಭವವಾಗಿತ್ತು, ಆದುದರಿಂದ ಈ ಬಗ್ಗೆ ಕೂಡಲೇ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಒಂದು ಪಟ್ಟಿಯನ್ನು ಮಾಡಿ ಕಳುಹಿಸಿಕೊಟ್ಟರೆ ಆ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಅಂದಾನಯ್ಯ.—ಸ್ವಾಮಿ, ತಾಲ್ಲೋಕು ಬೋರ್ಡ್ ಮತ್ತು ಪಿ. ಡಬ್ಲ್ಯೂ. ಡಿ. ಅವರು ತೆಗೆಯುವ ಬಾವಿಗಳಿಗೆ ತಾರತಮ್ಯ ಇದ್ದು, ತಾಲ್ಲೋಕು ಬೋರ್ಡ್ ವತಿಯಿಂದ ಮಾಡಿದ ಕೆಲಸ ನಿಂತು ಹೋಗಿದೆ, ಅದಷ್ಟು ಬೇಗ ಈಗ ನಿಂತು ಹೋಗಿರುವ ಕಾರ್ಯವನ್ನು ಪೂರ್ತಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಯೆಂಕಟಪ್ಪ.—ಸ್ವಾಮಿ, ತಾವು ಹೇಳಿರುವ ಪ್ರಕಾರ ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನವರು ತೋರಿಸಿದ ಜಾಗದಲ್ಲಿ ನೀರು ಬಾರದೆ ಇದ್ದು ಮತ್ತೆ ಅವರು ಪುನಃ ತೋರಿಸಿದ ಜಾಗದಲ್ಲೂ ನೀರು ಬರುವುದಿಲ್ಲ ಅಂತಹ ಕಡೆಗಳಲ್ಲಿ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ರಾಚಯ್ಯ.—ನೀರನ್ನು ಸರಬರಾಜು ಮಾಡುವ ವ್ಯವಸ್ಥೆಯಲ್ಲಿ ಏನು ಒಂದು ಅಡಚಣೆ ಉದ್ಭವಿಸುತ್ತದೆಯೋ ಅದನ್ನು ಪತ್ತೆ ಹಚ್ಚುತ್ತೇವೆ.

ಶ್ರೀ ಸಿ. ಬೈರೇಗೌಡ.—ಕೆಲವು ಕಡೆ ಸುಮಾರು ಎರಡು ಮೂರು ಫರ್‌ಲಾಂಗ್ ದೂರದಿಂದ ನೀರನ್ನು ತರುವುದು ಕಷ್ಟವಾಗುತ್ತದೆ, ಅಂತಹ ಕಡೆಗಳಲ್ಲಿ ಎಲಕ್ಟ್ರಿಕ್ ಪಂಪುಗಳನ್ನು ಇಟ್ಟು, ಊರಿನ ಮಧ್ಯದಲ್ಲಿ ನಲ್ಲಿ ಹಾಕುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಸ್ವಾಮಿ, ?

ಶ್ರೀ ಎನ್. ರಾಚಯ್ಯ.—ಬೈರೇಗೌಡರು ತಾಲ್ಲೋಕು ಬೋರ್ಡ್‌ಮಂಡಲಿಯಲ್ಲಿ ಅಧ್ಯಕ್ಷರಾಗಿದ್ದಾರೆ, ಪಾಪ್ಯುಲೇಷನ್ ಒಂದು ಸಾವಿರ ಜನಸಂಖ್ಯೆ ಇದ್ದಪಕ್ಷದಲ್ಲಿ ಹ್ಯಾಂಡ್ ಪಂಪ್‌ಗಳನ್ನು, ಎರಡು ಸಾವಿರ ಜನಸಂಖ್ಯೆಗೆ ಬೋರ್‌ವೆಲ್ ಪಂಪ್‌ಗಳನ್ನು, ಆದರ ಮೇಲೆ ಇದ್ದರೆ ಹೆಚ್ಚಿನ ಶಕ್ತಿ ಇರುವ ಬೋರ್‌ವೆಲ್ ಪಂಪನ್ನು ಉಪಯೋಗಿಸುತ್ತಿದ್ದಾರೆ. ಸಾಮಾನ್ಯವಾಗಿ ಹೆಚ್ಚು ನೀರು ಇಲ್ಲವೆ ಇರತಕ್ಕ ಕಡೆಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ, ಜನಗಳಿಗೆ ಅನುಕೂಲವಾಗುವ ಕಡೆಗಳಲ್ಲಿ ಬೋರ್‌ವೆಲ್ ಹಾಕಲು ಜಿಯಾಲಜಿಸ್ಟ್ ಸಲಹೆ ಮಾಡುತ್ತಾರೆ, ಆ ಸಲಹೆ ಪ್ರಕಾರ ಮಾಡುತ್ತಾ ಇದ್ದೇವೆ. ನೀವು ಕೂಡ ಸಲಹೆಗಳನ್ನು ಕೊಡಿ ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಹೆಚ್ಚಾಗಿ ಎಲ್ಲೆಲ್ಲ ಪಂಪುಗಳನ್ನು ಹಾಕಿದೆ, ಅಂತಹ ಕಡೆಗಳಲ್ಲಿ ಮೆಷಿನರಿ ಕೆಟ್ಟು ಹೋಗಿ ಒಂದು ತಿಂಗಳಾಗಿದೆ. ನೀರು ಎತ್ತುವುದಕ್ಕೆ ಸಾಧ್ಯವಿಲ್ಲ, ಅನೇಕ ಕಡೆ ನೀರಿನ ಅಭಾವವಾಗಿದೆ, ಕೆಲವು ಕಡೆ ರಿಪೇರಿ ಮಾಡುತ್ತಾರೆ, ಕೆಲವು ಕಡೆ ರಿಪೇರಿ ಮಾಡುವುದಿಲ್ಲ, ಮೆಷಿನರಿ ದೋಷ ಇರುವುದರಿಂದ ಕೂಡಲೇ ಇದನ್ನು ಸರಿಪಡಿಸುವ ವ್ಯವಸ್ಥೆ ಮಾಡುವುದಕ್ಕೆ ತಾವು ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಅದನ್ನು ಪ್ರಸ್ತಾಪ ಮಾಡಿ ಸರಿಪಡಿಸುವ ವ್ಯವಸ್ಥೆ ಮಾಡೋಣ.

Police Strength of Savanur Police Station

281 **Sri M. M. NADAF** (Shiggaon)—

Will the Chief Minister be pleased to state :—

(*a*) the number of villages under the control of Savanur State before its merger and the number of Constables, Head Constables and Sub-Inspecters working in that State before its merger ;

(*b*) the number of villages now under the jurisdiction of Savanur Police Station ;

(*c*) the number of villages proposed to be included under the Savanur Police Station jurisdiction ;